C-23720

Office of the Commissioner
No. 2192
Dt. 26/11/20
Health & FWS

**ಕರ್ನಾಟಕ ಸರ್ಕಾರದ ನಡವಳಿಗಳು**

ವಿಷಯ: 2020-21ನೇ ಸಾಲಿಗೆ ಸೇವಾನಿರತ 16 ಜನ ವೈದ್ಯರುಗಳನ್ನು ಕಾಲೇಜ್ ಆಫ್ ಫಿಜಿಷಿಯನ್ & ಸರ್ಜನ್ (CPS) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸುವ ಬಗ್ಗೆ.

ಓದಲಾಗಿದೆ: 1) ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು ಇವರ ಪತ್ರ ಸಂಖ್ಯೆ:ಬಿಇಸಿ/ಐಪಿಜಿ/215/2019-20, ದಿನಾಂಕ:27.10.2020.
2) ಸರ್ಕಾರದ ಆದೇಶ ಸಂ: ಎಫ್ ಡಿ 2 ಸನಿತಿ 2019, ದಿನಾಂಕ:7-6-2019.

-*-*-*-

**ಪ್ರಸ್ತಾವನೆ:**

ಮೇಲೆ ಓದಲಾದ ಪತ್ರದಲ್ಲಿ, ಮುಖ್ಯ ಆಡಳಿತಾಧಿಕಾರಿಗಳು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು, ಇವರು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇಲ್ಲಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಕಾಲೇಜ್ ಆಫ್ ಫಿಜಿಷಿಯನ್ ಸರ್ಜನ್ (ಸಿ ಪಿ ಎಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ಆಯ್ಕೆಯಾಗಿ ಪ್ರವೇಶ ಹೊಂದಿರುವ 16 ಸೇವಾನಿರತ ವೈದ್ಯರುಗಳ ಪಟ್ಟಿಯನ್ನು ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರು ಅಂತರ್ಜಾಲದಲ್ಲಿ ಪ್ರಕಟಿಸಲಾಗಿರುತ್ತದೆ. ಶೈಕ್ಷಣಿಕ ಅವಧಿ ಪ್ರಾರಂಭವಾಗಲಿದ್ದು ವ್ಯಾಸಂಗಕ್ಕೆ ಯಾವುದೇ ತೊಂದರೆಯಾಗಬಾರದೆಂಬ ಉದ್ದೇಶದಿಂದ ನಿರ್ದೇಶಕರು, ವೈದ್ಯಕೀಯ ಶಿಕ್ಷಣ, ಬೆಂಗಳೂರು ಇವರು ಅನುಮೋದಿಸಿರುವ ಅಧಿಕೃತ ಪಟ್ಟಿಯನ್ನಾದರಿಸಿ ಕೌನ್ಸಿಲಿಂಗ್‌ನಲ್ಲಿ ಭಾಗವಹಿಸಿ ಆಯ್ಕೆ ಮಾಡಿಕೊಂಡಿರುವ ವಿದ್ಯಾಲಯಗಳಲ್ಲಿ ತರಗತಿಗಳು ಈಗಾಗಲೇ ಪ್ರಾರಂಭವಾಗಿರುವುದರಿಂದ ಸ್ನಾತಕೋತ್ತರ ವ್ಯಾಸಂಗಕ್ಕೆ ವೈದ್ಯರುಗಳನ್ನು ನಿಯೋಜನೆಗೊಳಿಸಬೇಕಾಗಿರುತ್ತದೆ. 2020-21ನೇ ಸಾಲಿನ ಸಮಾಲೋಚನೆಯ ಪ್ರಕ್ರಿಯೆಯಂತೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರು ಅಂತರ್ಜಾಲದಲ್ಲಿ ಪ್ರಕಟಿಸಲಾದ ಪಟ್ಟಿಯಂತೆ ಅನುಬಂದದಲ್ಲಿನ 16 ವೈದ್ಯರುಗಳು ಆಯ್ಕೆ ಮಾಡಿಕೊಂಡಿರುವ ತಜ್ಞತೆ ಮತ್ತು ವಿದ್ಯಾಲಯಗಳನ್ನೊಳಗೊಂಡಂತೆ ಕೆ.ಸಿ.ಎಸ್.ಆರ್ ನಿಯಮ 61ರ ಅಪೆಂಡಿಕ್ಸ್ 2A-1 ರನ್ವಯ, 2020-21ನೇ ಸಾಲಿಗೆ ಅನುಬಂಧದಲ್ಲಿ ತೋರಿಸಲಾದ ವೈದ್ಯರುಗಳು ಕಾಲೇಜ್ ಆಫ್ ಫಿಜಿಷಿಯನ್ ಸರ್ಜನ್ (ಸಿ ಪಿ ಎಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜನೆಗೊಳಿಸಲು ಅರ್ಹರಿದ್ದು, ಈ ಸಂಬಂಧ ಸರ್ಕಾರದ ಆದೇಶವನ್ನು ಹೊರಡಿಸುವಂತೆ ಇಲಾಖೆಯು ಶಿಫಾರಸ್ಸಿನೊಂದಿಗೆ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿರುತ್ತಾರೆ.

ಈ ಎಲ್ಲಾ ಅಂಶಗಳ ಹಿನ್ನೆಲೆಯಲ್ಲಿ ಸದರಿ ವೈದ್ಯರನ್ನು 2020-21ನೇ ಸಾಲಿಗೆ ಷರತ್ತು ಮತ್ತು ನಿಬಂದನೆಗಳಿಗೆ ಒಳಪಟ್ಟು ಸೇವಾ ನಿರತವಾಗಿ ಪ್ರಥಮ ಬಾರಿಗೆ ಕಾಲೇಜ್ ಆಫ್ ಫಿಜಿಷಿಯನ್ ಸರ್ಜನ್ (ಸಿ ಪಿ ಎಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸಲು ಸರ್ಕಾರವು ನಿರ್ಧರಿಸಿದೆ. ಆದ್ದರಿಂದ ಈ ಆದೇಶ.

ಮು(86) ಬ
BEC

**ಸರ್ಕಾರಿ ಆದೇಶ ಸಂಖ್ಯೆ: ಆಕುಕ 592 ಹೆಚ್ಎಸ್.ಹೆಚ್ 2020,**
**ಬೆಂಗಳೂರು, ದಿನಾಂಕ:17-11-2020.**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, 2020-21ನೇ ಶೈಕ್ಷಣಿಕ ಸಾಲಿನಲ್ಲಿ ಕರ್ನಾಟಕ ಪರೀಕ್ಷಾ ಪ್ರಾಧಿಕಾರ, ಬೆಂಗಳೂರು ಇವರು ನಡೆಸಿದ ಪ್ರವೇಶ ಪರೀಕ್ಷೆಯಲ್ಲಿ ಉತ್ತೀರ್ಣಗೊಂಡು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕೌನ್ಸಿಲಿಂಗ್ ಮೂಲಕ ಸೇವಾನಿರತ ಸ್ನಾತಕೋತ್ತರ ವ್ಯಾಸಂಗಕ್ಕಾಗಿ ಕಾಲೇಜು ಮತ್ತು ವಿಷಯವನ್ನು ಆಯ್ಕೆ ಮಾಡಿಕೊಂಡಿರುವ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ **ಅನುಬಂಧದಲ್ಲಿ** ತೋರಿಸಲಾದ 16 ಮಂದಿ ವೈದ್ಯಾಧಿಕಾರಿಗಳ ಪೈಕಿ ಕ್ರ.ಸಂ:9,13 & 15ರ ವೈದ್ಯರುಗಳನ್ನು ಕರ್ನಾಟಕ ನಾಗರೀಕ ಸೇವೆ ನಿಯಮಗಳು 1958ರ ನಿಯಮ 61ರ ಪರಿಶಿಷ್ಟ 2ಎ ಕಂಡಿಕೆ-1ರನ್ವಯ, ಹಾಗೂ ಇನ್ನುಳಿದ ಕ್ರಮ ಸಂಖ್ಯೆಯ ವೈದ್ಯರುಗಳನ್ನು ಕೆ.ಸಿ.ಎಸ್.ಆರ್. ನಿಯಮ-61 ಪರಿಶಿಷ್ಟ-11ಎ 1 ರಲ್ಲಿನ ಐದು (5) ವರ್ಷಗಳು ಸೇವೆಯನ್ನು ಸಲ್ಲಿಸಿರಬೇಕೆಂಬ ಷರತ್ತನ್ನು ಸಡಿಲಿಸಿ, ಉಲ್ಲೇಖಿತ (2)ರ ಆದೇಶದನ್ವಯ, ಈ ಕೆಳಕಂಡ ಷರತ್ತು ಮತ್ತು ನಿಬಂಧನೆಗಳಿಗೆ ಒಳಪಡಿಸಿ 2020-21ನೇ ಸಾಲಿನಲ್ಲಿ ಸೇವಾನಿರತವಾಗಿ ಪ್ರಥಮ ಬಾರಿಗೆ ಕಾಲೇಜ್ ಆಫ್ ಫಿಜಿಷಿಯನ್ ಸರ್ಜನ್ (ಸಿ ಪಿ ಎಸ್) ಸ್ನಾತಕೋತ್ತರ ವ್ಯಾಸಂಗಕ್ಕೆ ನಿಯೋಜಿಸಿ ಆದೇಶಿಸಿದೆ.

1. ಕರ್ನಾಟಕ ನಾಗರೀಕ ಸೇವಾ ನಿಯಮಾವಳಿಯ ಪರಿಶಿಷ್ಟ 2ಎ ರಲ್ಲಿ ತಿಳಿಸಿದಂತೆ ನಮೂನೆ 19 ರಲ್ಲಿ ಕೆಳಕಂಡ ಅಂಶಗಳನ್ನು ಒಳಗೊಂಡ ಒಂದು ಬಂಧಪತ್ರವನ್ನು ಹಾಗೂ ಸೇವಾನಿರತ ಕೋಟಾದ ವೈದ್ಯರುಗಳಿಗೆ ಅನ್ವಯವಾಗುವ Karnataka Conduct Of Entrance Test For Selection And Admission

--2

CAO No. 101 Date 27/11